ಆರೋಪವಿದೆ. ಅಲ್ಲದೆ ೧೩ ಲಕ್ಷ ರೂಪಾಯಿಗಳ ಹಣದ ದುರುಪಯೋಗ ಆವರು ಮಾಡಿದ್ದಾರೆಂದೆ ಸಿ.ಒ.ಡಿ.ಯವರು ತನಿಖೆ ಮಾಡಿ ಅವರ ಮೇಲೆ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಿದ್ದಾರೆ. ಅಂತಹ ಆಪಾದನೆಗೊಳಗಾಗಿರುವ ವ್ಯಕ್ತಿಯನ್ನು ಭೂ ನ್ಯಾಯಮಂಡಳಿಯಂತಹ ಜವಾಬ್ದಾರಿ ಸ್ಥಾನಕ್ಕೆ ನೇಮಕ ಮಾಡಿರುವುದು ಯೋಗ್ಯವೇ? ಅಂತಹ ವ್ಯಕ್ತಿಯನ್ನು ಈ ಸ್ಥಾನಕ್ಕೆ ಸೂಚಿಸಿದವರು ಯಾರು? ಇವರ ನೇಮಕಾತಿಯ ಬಗ್ಗೆ ಸರ್ಕಾರ ಮರುಯೋಚನೆ ಮಾಡುವುದೇ ಎನ್ನುವ ಬಗ್ಗೆ ಸಭೆಗೆ ತಿಳಿಸುವಿರಾ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).--ಮಾನ್ಯ ಅಧ್ಯಕ್ಷರೇ, ಹಿಂದಿನ ಮೂರು ಅಧ್ಯಕ್ಷರ ಮೇಲೆ ಅಟ್ಯಾಚ್‌ಮೆಂಟ್ ಬಿಫೋರ್ ಜಡ್ಜ್‌ಮೆಂಟ್, ಅವರ ಆಸ್ತಿಯನ್ನು ಜಪ್ತಿ ಮಾಡಿದ್ದೇವೆ. ಈ ಒಂದು ಪ್ರಕರಣ ಜಾಯಿಂಟ್ ರಿಜಿಸ್ಟ್ರಾರ್ ಮುಂದೆ ನಡೆಯುತ್ತಾ ಇದೆ. ಅವರು ಲ್ಯಾಂಡ್ ಟ್ರಿಬ್ಯೂನಲ್ ಮುಂದೆ ಹೋಗಿದ್ದಾರೆ ಎಂದು ಏನು ಹೇಳಿದ್ದಾರೆ ಅದಕ್ಕೂ ನನಗೂ ಸಂಬಂಧ ಇಲ್ಲ. ಆದರೂ ಕೂಡ ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್ (ಗ್ರಾಮೀಣಾಭಿವೃದ್ಧಿ ರಾಜ್ಯ ಮಂತ್ರಿಗಳು).--ಮಾನ್ಯ ಅಧ್ಯಕ್ಷರೇ, ಶ್ರೀ ರಾಮಯ್ಯನವರು ತಿಪಟೂರು ತಾಲ್ಲೂಕಿನ ಮೇರೆಗೆ ಒಂದು ವಿಷಯವನ್ನು ರೈಸ್ ಮಾಡಿದ್ದರು. ಆದರ ಬಗ್ಗೆ ನಾನು ಒಂದು ಸ್ಟೇಟ್‌ಮೆಂಟ್ ಮಾಡಲಿಕ್ಕೆ ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.--ಆಗಬಹುದು.

ಮಂತ್ರಿಯವರಿಂದ ಹೇಳಿಕೆ

ಹಿರಿಯೂರು ತಾಲ್ಲೂಕಿನ ರಂಗೇನಹಳ್ಳಿ ಮತ್ತು ಬಿದರಕೆರೆ ಗ್ರಾಮಗಳಲ್ಲಿ ಗ್ರಾಮಸಭೆಯನ್ನು ಏರ್ಪಡಿಸಿರುವ ಬಗ್ಗೆ.

ಶ್ರೀ ಬಿ. ಆರ್. ಯಾವಗಲ್ (ಗಾಮೀಣಾಭಿವೃದ್ಧಿ ಮಂತ್ರಿಗಳು).--ನನ್ನ ಹೇಳಿಕೆ.

ಗ್ರಾಮ ಸಭೆಯನ್ನು ಪಕ್ಷದ ಮತಿಯಿಂದ ಏರ್ಪಡಿಸಬಹುದೆ? ಅಂತಹ ಸಭೆಯಲ್ಲಿ ಅಧಿಕಾರಿಗಳು ಪಾಲ್ಗೊಳ್ಳಬಹುದೆ?

ಹಿರಿಯೂರು ತಾಲ್ಲೂಕಿನಲ್ಲಿ ರಂಗೇನಹಳ್ಳಿ ಮತ್ತು ಬಿದರಕೆರೆ ಗ್ರಾಮಗಳಲ್ಲಿ ಗ್ರಾಮ ಸಭೆಯನ್ನು ಯುವ ಜನತಾ ಪಕ್ಷ ೧೫-೧-೮೯ರಂದು ಏರ್ಪಡಿಸಿ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ಬರಮಾಡಿಕೊಂಡಿರುವುದು ಅಧಿಕಾರಿಗಳು ಜನತಾ ಪಕ್ಷದ ಬೆಂಬಲಿಗರನ್ನಾಗಿಸಿದಂತಾಗಿದೆ. ಇದರಿಂದ ತಾಲ್ಲೂಕಿನ ಜನತೆಯಲ್ಲಿ ಈ ಪಕ್ಷದ ಮುಖಂಡರನ್ನು ತಮ್ಮ ಗಳ ಕೆಲಸಕ್ಕೆ ಕಛೇರಿಗೆ ಕರೆದುಕೊಂಡು ಹೋಗಬೇಕಾಗಿ ಬಂದೊದಗಿರುವ ಪ್ರಸಂಗಕ್ಕೆ ವ್ಯಥೆಪಟ್ಟಿರುತ್ತಾರೆ. ಗ್ರಾಮಸಭೆ ಪಕ್ಷರಹಿತವಾದ ಹಾಗೂ ಎಲ್ಲರ ಸಮಸ್ಯೆಗಳನ್ನು ಆಲಿಸಿ ಪರಿಹಾರವನ್ನು ಕಂಡುಕೊಳ್ಳುವ ವ್ಯವಸ್ಥೆ ಇದರ ಮೂಲ ಉದ್ದೇಶಕ್ಕೆ ಚಿತ್ರದುರ್ಗ ಜಿಲ್ಲಾ ಮಂತ್ರಿಗಳು ಕೊಡಲಿಪೆಟ್ಟನ್ನು ಹಾಕಿದ್ದಾರೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ಮಾನ್ಯ ಸದಸ್ಯರಾದ ಶ್ರೀ ಆರ್. ರಾಮಯ್ಯನವರು ಹೇಳಿದ್ದಾರೆ.

ಅದಕ್ಕೆ ಉತ್ತರ ಈ ರೀತಿ ಇದೆ.

ಚಿತ್ರದುರ್ಗದ ಜಿಲ್ಲಾ ಸಚಿವರೂ ಹಾಗೂ ಕಾರ್ಮಿಕ ಸಚಿವರೂ ಆದ ಸನ್ಮಾನ್ಯ ಶ್ರೀ ಮಂಜುನಾಥ್ ರವರ ಸೂಚನೆಯಂತೆ ಹಿರಿಯೂರು ತಾಲ್ಲೂಕಿನ ತಹಸೀಲ್ದಾರ್‌ರವರು ಬಿದರೆಕೆರೆಯಲ್ಲಿ ಗ್ರಾಮ ಸಭೆಯನ್ನು ತಾ. ೧೯-೧-೮೯ ರಂದು ಕರೆದಿದ್ದರು. ಆ ಸಭೆಯಲ್ಲಿ ತಾಲ್ಲೂಕಿನ ಅಧಿಕಾರಿಗಳಾದ ತಹಸೀಲ್ದಾರರು, ಕ್ಷೇತ್ರಾಭಿವೃದ್ಧಿ ಅಧಿಕಾರಿ, ಸಹಾಯಕ ಕಾರ್ಯಪಾಲಕ ಅಭಿಯಂತರು (ಲೋಕೋಪಯೋಗಿ ಇಲಾಖೆ ಮತ್ತು ವಿದ್ಯುತ್‌ಚ್ಛಕ್ತಿ) ಜನಾರೋಗ್ಯ ಇಲಾಖೆ ಮತ್ತು ನೀರಾವರಿ ಇಲಾಖೆಯ ಸಹಾಯಕ ಅಭಿಯಂತರು) ಮತ್ತು ಸಹಾಯಕ ವಿದ್ಯಾಧಿಕಾರಿಗಳು ಭಾಗವಹಿಸಿದ್ದರು. ಚಿತ್ರದುರ್ಗದ ಕ್ಷೇತ್ರದ ಶಾಸಕರು ಸಭೆಯ ಅಧ್ಯಕ್ಷತೆ ವಹಿಸಿದ್ದರು ಮತ್ತು ಚಿತ್ರದುರ್ಗದ ಕಂದಾಯ ಉಪ ವಿಭಾಗಾಧಿಕಾರಿಗಳು ಮುಖ್ಯ ಅತಿಥಿಗಳಾಗಿದ್ದರು. ಆ ದಿನದ ಸಭೆಯಲ್ಲಿ ಒಬ್ಬರಿಗೆ ವೃದ್ಧಾಪ್ಯವೇತನ, ೮ ವಿಧವಾ ವೇತನ, ಒಂದು ಅಂಗವಿಕಲರ ವೇತನ ಮತ್ತು ೫ ಪ್ರಾಯೋಗಿಕ ಗೃಹ ಮಂಜೂರಾತಿ ಪತ್ರಗಳನ್ನು ಮಾನ್ಯ ಸಚಿವರು ವಿತರಣೆ ಮಾಡಿದರು.

ರಂಗೇನಹಳ್ಳಿಯಲ್ಲಿ ಗ್ರಾಮಸಭೆಯನ್ನು ನಡೆಸಲಿಲ್ಲ. ತಾ. ೧೯-೧-೮೬ ರಂದು ಭಗವತಿ ಆಂಜನೇಯ ವಿದ್ಯಾಸಂಸ್ಥೆಯವರು ರಂಗೇನಹಳ್ಳಿಯಲ್ಲಿ ತಮ್ಮ ಶಾಲಾ ದಿನಾಚರಣೆಯನ್ನು ಆಚರಿಸಿದರು. ಆ ಕಾರ್ಯಕ್ರಮದಲ್ಲಿ ತಹಸೀಲ್ದಾರರು, ಸಹಾಯಕ ವಿದ್ಯಾಧಿಕಾರಿಗಳು ಮತ್ತು ಸಹಾಯಕ ಕಾರ್ಯಪಾಲ ಅಭಿಯಂತರರು ಭಾಗವಹಿಸಿದ್ದರು.

ಈ ಸಂಬಂಧದಲ್ಲಿ ಸ್ಪಷ್ಟಪಡಿಸಬೇಕಾದ ಅಂಶವೆಂದರೆ ಬಿದರಕೆರೆ ಗ್ರಾಮದಲ್ಲಿ ನಡೆದ ಸಮಾರಂಭವು ಜಿಲ್ಲಾಮಂತ್ರಿಗಳು ಭಾಗವಹಿಸಿದ್ದ ಒಂದು ಸಾರ್ವಜನಿಕ ಸಮಾರಂಭ ಪಕ್ಷದ ಸಭೆಯಲ್ಲ.

ಶಾಸನ ರಚನಾ ಕಾರ್ಯಕಲಾಪಗಳು

ವಿಧೇಯಂಕಗಳನ್ನು ಮಂಡಿಸುವುದು

1986ನೇ ಇಸವಿಯ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಂಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಪಿ. ಪ್ರಕಾಶ್ (ಕೃಷಿ ಮಂತ್ರಿಗಳು).—ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ತಮ್ಮ ಅನುಮತಿಯನ್ನು ಕೋರಿ ಈ ವಿಧೇಯಂಕವನ್ನು ಮಂಡಿಸುತ್ತೇನೆ.

ಮಾನ್ಯ ಅಧ್ಯಕ್ಷರೇ,

"೧೯೮೬ನೇ ಇಸವಿಯ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ"

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "೧೯೮೬ನೇ ಇಸವಿಯ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.*

1986ನೇ ಇಸವಿಯ ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿ).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, "೧೯೮೬ನೇ ಇಸವಿಯ ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿ).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಕೈಗಾರಿಕಾ ಸಂಸ್ಥೆಗಳು (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಇಡುತ್ತೇನೆ,

---

* Annerure